ಶ್ರೀ ಎ. ಮುನಿಯಪ್ಪ.—ತರಬೇತಿ ಪಡೆಯುವವರಿಗೆ ದೋಣಿಗಳನ್ನು ಕೊಡುವಾಗ ಯಾವ ಆಧಾರದಮೇಲೆ ಕೊಡುತ್ತೀರೀ. ಇವರ ಜಮೀನುಗಳನ್ನು ತೆಗೆದುಕೊಳ್ಳುತ್ತೀರಾ ಇಲ್ಲವೇ ಸಾಲ್ವೆನ್ಸಿ ನೋಡುತ್ತೀರಾ ? ಹೇಗೆ ?

ಶ್ರೀ ಡಿ. ದೇವರಾಜ ಅರಸ್.—ಸೊಸೈಟಿಗಳ ಮೂಲಕ ಕೊಡುತ್ತಿರುವುದರಿಂದ ಯಾವ ಆಧಾರವನ್ನೂ ಪಡೆಯುತ್ತಿಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರೀ.—ಉತ್ತರ ಕನ್ನಡಕ್ಕೆ 120 ದೋಣಿಗಳು ಹಾಗೂ ದಕ್ಷಿಣ ಕನ್ನಡಕ್ಕೆ 164 ದೋಣಿಗಳು ಕೊಟ್ಟಿದೆ ಎಂದು ಹೇಳಿದ್ದೀರಿ. ಯಾರು ಯಾರಿಗೆ ಕೊಡಲಾಗಿದೆ ಎನ್ನುವವರ ಹೆಸರುಗಳನ್ನು ಕೊಡುವುದಕ್ಕಾಗುತ್ತದೆಯೆ ?

ಶ್ರೀ ಡಿ. ದೇವರಾಜ ಅರಸ್.—ಬೇರೆ ಪ್ರಶ್ನೆ ಕೇಳಿದರೆ ಆಗ ಇದರ ದೊಡ್ಡ ಪಟ್ಟಿಯನ್ನೇ ಬೇಕಾದರೆ ಓದಗಿಸಿಕೊಡುತ್ತೇನೆ.

———

Land reserved for Mohammedans in Sirsi

*Q.—210. Sri M. H. JAYAPRAKASH NARAYAN (Sirsi).—

Will the Minister for Municipal Administration be pleased to state:—

(*a*) the extent of land reserved by them in S. No. 59 and 60 of Sirsi Town to Mohammedans, a minority community, for the construction of Idga for Namaz purposes;

(*b*) whether there is a Government Order to the effect that the said reserve land should not be disposed off;

(*c*) whether they have acquirid a portion of the said reserve land to provide sites to the members of the Sirsi Horticultural Society to construct houses;

(*d*) if so, the extent thereof;

(*e*) who has disposed the acquired land and when and under which order ?

A.—Sri R. M. PATIL (Minister for Municipal Administration).—

(*a*) Two acres.

(*b*) No.

(*c*) No.

(*d*) Does not arise.

(*e*) Does not arise.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—1956ನೇ ಇಸವಿಯಲ್ಲಿ ಬೊಂಬಾಯಿ ಹಾಗೂ ಉತ್ತರ ಕನ್ನಡಜಿಲ್ಲೆ ಮೈಸೂರು ದೇಶಕ್ಕೆ ಸೇರಿದಾಗ ಅಲ್ಲಿಂದ ಕಳುಹಿಸಿದ ರಿಕಾರ್ಡುಗಳಲ್ಲಿ ಒಂಬತ್ತು ಎಕರೆಗಳಷ್ಟು ಭೂಮಿ ಮುಸ್ಲಿಮರಿಗಾಗಿ ಮೀಸಲಾಗಿಡಲಾಗಿದೆ ಎಂದು ರಿಕಾರ್ಡ್ ಆಫ್ ರೈಟ್ಸ್‌ನಲ್ಲಿದ್ದುದು ಸರಕಾರದ ಗಮನದಲ್ಲಿದೆಯೇ ?

ಶ್ರೀ ಆರ್. ಎಂ. ಪಾಟೀಲ್.—ಆ ಪ್ರಕಾರ ಇಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಮುಸ್ಲಿಮರು ಇಲ್ಲಿದ್ದವರು ಕಾಂಗ್ರೆಸ್ಸಿಗೆ ವೋಟು ಕೊಡಲಿಲ್ಲ ಎಂದು ಅಲ್ಲಿರುವ ಪಾರ್ಲಿಮೆಂಟು ಸದಸ್ಯರು ಹಾಗೂ ಅಸೆಂಬ್ಲಿಸದಸ್ಯರು ಮುಸ್ಲಿಮರನ್ನು ಕರೆದು ನೀವು ಕಾಂಗ್ರೆಸ್ಸಿಗೆ ಓಟುಕೊಟ್ಟರೆ ನಿಮಗೆ ಈಗ ಜಾಗ ಕೊಡಿಸಿ ಕೊಡುತ್ತೇವೆ ಎಂದು ಹೇಳಿ ಅನಂತರ ಇದನ್ನು ನಿರ್ಧಾರ ಮಾಡಿರುವುದು ಸರಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಆರ್. ಎಂ. ಪಾಟೀಲ್.—ಈ ಪ್ರಶ್ನೆ ಇದರಲ್ಲಿ ಉದ್ಭವವಾಗುವುದಿಲ್ಲ.

ಶ್ರೀ ಸಿ. ಆರ್. ರಂಗೇ ಗೌಡ.—ನಮಾಜು ಮಾಡುವ ಪ್ರದೇಶವನ್ನು ಯಾರಿಗೂ ಕೊಡಕೂಡದು ಎಂದು ಅಲ್ಲಿರುವ ವಿಭಾಗಾಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ನೋಡೆನೆಯನ್ನು ಕಳುಹಿಸಿರುವುದು ಸರಕಾರದ ಗಮನಕ್ಕೆ ಬಂದಿದೆಯೆ ? ಅವರು ಕೊಟ್ಟಿರುವ ಆರ್ಡರಿನ ವಿವರಗಳನ್ನು ತಿಳಿಸುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಇದರ ಬಗ್ಗೆ ಕಲೆಕ್ಟರದು ಒಂದು ಆರ್ಡರ್ ಇದೆ. ಅದು ಹೀಗಿದೆ 1936ರಲ್ಲಿ ಇದು ಆರ್ಡರು ಆದದ್ದು. There is an order that Idga in Survey No. 60 should be kept as it is. In respect of Survey No. 59 there is an endorsement to the effect that Muslims might construct in the Survey Number Idga similar to that situated in Survey No. 60 as per Collector's order.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಕಲೆಕ್ಟರ್ ಆರ್ಡರ್‌ನಲ್ಲಿ ಮತ್ತು ಡಿವಿಜನಲ್ ಕಮಿಷನರ್ ಆರ್ಡರ್‌ನಲ್ಲಿ ಈ ಜಾಗದಲ್ಲಿ 9 ಎಕರೆ ಜಮೀನು ಇದೆಯೆಂದು ಹೇಳಿದೆ. ಎರಡು ಎಕರೆ ಜಮೀನು ಎಂದು ಉತ್ತರ ಕೊಟ್ಟಿರುವುದು ಯಾವಾಗ ಅಂದರೆ ತೋಟಗಾರಿಕೆ ಸಂಘದವರು ಅಕ್ಷೇಪಣೆ ಮಾಡಬೇಕೆಂದು ಏರ್ಪಾಡುಮಾಡಿದಮೇಲೆ. ಈಗ ಅವರು ಆ ಎರಡು ಎಕರೆಗಳನ್ನು ರಿಜರ್ವ್‌ಮಾಡಿ ಎಂದು ಆರ್ಡರ್ ಮಾಡಿದ್ದಾರೆ. ಇದಕ್ಕೆ ಮೊದಲು ಆ ಜಾಗ 9 ಎಕರೆ ಇದ್ದುದನ್ನು ಯಾರಿಗೂ ಕೊಡಬಾರದು ಅದನ್ನು ಸಾರ್ವಜನಿಕರಿಗೋಸ್ಕರ ರಿಜರ್ವ ಮಾಡಬೇಕೆಂಬುದಾಗಿ ಡೆಪ್ಯುಟಿ ಕಮಿಷನರ್ ಮತ್ತು ಡಿವಿಜನಲ್ ಕಮಿಷನರ್ ಆರ್ಡರ್ ಮಾಡಿರಲಿಲ್ಲವೇ ?

Sri R. M. PATIL.—In 1916 there was an order that survey Nos. 59 and 60 should not be granted to anybody as they may be required for construction of Government buildings. Thereafter there was also another direction that it should be reserved for grazing purposes. Thereafter there is another direction as I have stated just now. In 1962. 8 acres and 22 guntas in survey Nos.59 and 60 was granted to the Chairman of the Agricultural Marketing Committee for the purpose of constructing the Market Yard.

ಶ್ರೀ ಎಂ. ಎಸ್. ಕೃಷ್ಣನ್.—ಎರಡು ಎಕರೆಗಳನ್ನು ಈಗ ತಾವು ಏನು ಕೊಟ್ಟಿದ್ದೀರಿ ಅದು ಯಾವ ತೊಂದರೆ ತಕರಾರುಗಳು, ಮಾನಾಪೇಕ್ಷವೇನೂ ಇಲ್ಲದೆ ಆಜ್ಯೆರಾಗಿ ಮುನಿಸಿಪಾಲಿಟಿಗೇ ಕೊಟ್ಟಿದೆ ಎಂಬುದಾಗಿ ಸರ್ಕಾರದಲ್ಲಿ ತೀರ್ಮಾನವಾಗಿದೆಯೆ ?

ಶ್ರೀ ಆರ್. ಎಂ. ಪಾಟೀಲ್.—ಹೌದು ಆ ಎರಡು ಎಕರೆಗಳು ಅವರ ಸಲುವಾಗಿಯೇ ಇಟ್ಟಿತ್ತು ಎಂದು ನನ್ನ ಕಡೆಗೆ ಇದ್ದ ಮಾಹಿತಿಯಮೇಲೆ ಅರ್ಥವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ತೋಟಗಾರಿಕೆ ಸಂಘದವರು ಈ ಜಾಗವನ್ನು ಸೇರಿಸಿ ಅವರೇ ತಗೆದುಕೊಳ್ಳುತ್ತೇವೆಂದು ಸರ್ಕಾರದವರು ಅದಕ್ಕೆ ಒಪ್ಪಿಗೆ ಕೊಡಬೇಕೆಂದು ಹೇಳುತ್ತಿರುವುದು ನಿಜವೇ ?

ಶ್ರೀ ಆರ್. ಎಂ. ಪಾಟೀಲ್.—ಅದನ್ನು ಈಗಾಗಲೇ ಮಾರ್ಕೆಟ್ ಕಮಿಟಿಗೆ ಕೊಟ್ಟಿದ್ದಾಗಿದೆ.

ಶ್ರೀ ಎ. ಮುನಿಯಪ್ಪ.—ಉತ್ತರದಲ್ಲಿ ಮಸೀದಿ ಕಟ್ಟುವುದಕ್ಕೆ ಎರಡು ಎಕರೆಗಳನ್ನು ಇಟ್ಟಿದ್ದೇವೆಂದು ಹೇಳಿದ್ದೀರಿ. ಮಸೀದಿ ಕಟ್ಟುವುದಕ್ಕೆ ಇಷ್ಟು ವರ್ಷಗಳಿಂದ ಏನಾದರೂ ಪ್ರಯತ್ನಮಾಡಿದ್ದಾರೆಯೆ ? ಇಲ್ಲದಿದ್ದರೆ ಅಲ್ಲಿ ಮಸೀದಿಯನ್ನು ಅವರು ಕಟ್ಟುವುದಕ್ಕೆ ಏನಾದರೂ ವ್ಯವಸ್ಥೆಮಾಡಿಕೊಂಡಿರುವ ವಿಷಯ ತಮಗೆ ಗೊತ್ತಿದೆಯೆ ?

ಶ್ರೀ ಆರ್. ಎಂ. ಪಾಟೀಲ್.—ಅದು ಮಸೀದಿಗೆ ಅಲ್ಲ. ಇದ್ದಾಗೋಸ್ಕರ. ಅದೇ ಬೇರೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಈ ಜಾಗವನ್ನು ವಿಲೇವಾರಿ ಮಾಡುವಾಗ ಒಂದು ಆರ್ಡರನ್ನು ಮಾಡಿದರು. ಅದರಮೇರೆ ಈ ಆರ್ಡರ್ ಉದ್ಭವಿಸಿದೆ. ಆದರಿಂದ ಹಿಂದೂ ಮುಸ್ಲಿಮರಿಗೆ ಗರಾಟೆಯಾಗಿ ಕಡೆಗೆ 6 ಲಕ್ಷರೂಪಾಯಿಗಳ ಬಂಡವಾಳ ಹೊಂದಿದ್ದಂಥ ಟಿಂಬರ್ ಡಿಪೋಗೆ ಬೆಂಕಿ ಹತ್ತಿಸಿ ಸುಟ್ಟು ಹಾಕಿದ್ದಾರೆ. ಇಂತಹ ಅನಾಹುತ, ತೊಂದರೆಯಾಗಿರುವ ವಿಚಾರದ ಬಗ್ಗೆ ಸರ್ಕಾರಕ್ಕೆ ಏನಾದರೂ ವರದಿ ಬಂದಿದೆಯೇ ?

ಶ್ರೀ ಆರ್. ಎಂ. ಪಾಟೀಲ್.—ನಾನು ಇನ್ನೂ ಅದನ್ನು ವಿಚಾರಮಾಡಬೇಕು. ಅದರ ಬಗ್ಗೆ ಈಗ ಅಗಿರತಕ್ಕದ್ದು ಏನೆಂದರೆ ಇದರ ಬಗ್ಗೆ ಅಗ್ರಿಕಲ್‌ಚರಲ್ ಪ್ರೊಡ್ಯೂಸ್ ಮಾರ್ಕೆಟಿಂಗ್ ಕಮಿಟಿ ಚೇರಮನ್‌ರು ಡಿವಿಜನಲ್ ಕಮಿಷನರ್ ಹತ್ತಿರ ಅಪೀಲು ಹೋಗಿದ್ದಾರೆ. ಡಿವಿಜನಲ್ ಕಮಿಷನರ್ ಟ್ರಿಬ್ಯೂನರ್‌ಗೆ ಅಪೀಲು ಹೋಗಿದ್ದಾರೆ. ನಂತರ ಟ್ರಿಬ್ಯೂನಲ್ ಅವರು ಒಂದು ವರದಿಯನ್ನು ಮಾಡಿದ್ದಾರೆ. ಇದೆಲ್ಲಾ ಸಿವಿಲ್‌ಲಿಟಿಗೇಷನ್ ಅಗುತ್ತದೆ. ಆದ್ದರಿಂದ ಇನ್ನೂ ಇದನ್ನು ಪೂರ್ಣವಾಗಿ ವಿಚಾರಮಾಡಬೇಕು. ಅದರ ಪೂರ್ಣಮಾಹಿತಿ ಈಗ ನನ್ನಲ್ಲಿಲ್ಲ.

Irrigation Works in Supa Taluk

*Q.—618. **Sri B. P. KADAM** (Karwar).—

Will the Minister for Public Works be pleased to state:—

(*a*) the works taken up under major or minor irrigation in the Akheti Village Panchayat area in the Supa taluk of the North Kanara District during the last four years ;

(*b*) the rate of progress each year ;

(*c*) the present progress ?

A.—**Sri ALUR HANUMANTHAPPA** (Deputy Minister for Minor Irrigation).—

(*a*) *Minor Irrigation 1965-66.*—

Bandhara across nalla at Akhetimedha Village, Supa Taluk North Kanara District.

(*b*)	*Year*		*Outlay*
	1965-66	...	Rs. 11,508-17
	1966-67 till to-date	...	Rs. 1,986-83

(*c*) Work practically completed.

Sri B. P. KADAM.—In answer to (c) it is stated that the work is practically completed. May I know the exact progress up till the commencement of the mosoon at the beginning of June ?

† **Sri ALUR HANUMANTHAPPA.**—As already stated in the printed answer, the work is practically completed, and 123 acres are under irrigation.

Sri B. P. KADAM.—This is the only work taken up under irrigation since 1961-62. Is it not a fact that construction is going on for the last five years and is not completed up till now ?